# ಹರ್ಷಚಿತ್ತ

## ಸ್ವಾಮಿ ವಿವೇಕಾನಂದ

ಪ್ರೊ. ಎನ್. ಕೃಷ್ಣಸ್ವಾಮಿ




**ಚಿಕ್ಕ** ವಯಸ್ಸಿನಿಂದಲೂ ಸ್ವಾಮಿ ವಿವೇಕಾನಂದರು ಹಾಸ್ಯ ಪ್ರಿಯರು. ಈ ಪ್ರವೃತ್ತಿಯೇ ಅವರ ಜೀವನದ ಉದ್ದಕ್ಕೂ ಕಂಡು ಬರುತ್ತದೆ. ಅವರ ಶಿಷ್ಯವರ್ಗದ ಕೆಲವರು ಅದಕ್ಕೆ ಸಾಕ್ಷಿಗಳು. ಅವರ ಕೆಲವು ಅನುಭವಗಳನ್ನು ನೋಡೋಣ.

### ಸೋದರಿ ಕ್ರಿಸ್ಟಿನ್

ಈಕೆ ಅಮೆರಿಕೆಯವಳು. ಸೋದರಿ ನಿವೇದಿತೆಯ ಹಾಗೆ ತನ್ನ ಸರ್ವಸ್ವವನ್ನೂ ಗುರು ಸ್ವಾಮಿ ವಿವೇಕಾನಂದರಿಗೆ ಅರ್ಪಿಸಿ ಭಾರತಕ್ಕೆ ಬಂದು ಅತಿ ಶ್ಲಾಘನೀಯ ರೀತಿಯಲ್ಲಿ ವಿದ್ಯಾಭ್ಯಾಸದ ಕಾರ್ಯವನ್ನು ಮಾಡಿದಳು. ಡೆಟ್ರಾಯ್ಟ್ ನಗರದ ಒಂದು ಬಡ ಕುಟುಂಬದಲ್ಲಿ ಹುಟ್ಟಿದ ಕ್ರಿಸ್ಟಿನ್ ಆ ನಗರದಲ್ಲಿ ಸ್ವಾಮೀಜಿ ಮಾಡಿದ ಎಲ್ಲ ಭಾಷಣಗಳನ್ನು ಶ್ರದ್ಧೆಯಿಂದ ಕೇಳಿದಳು. ಅದರಿಂದ ಪ್ರಭಾವಿತಳಾಗಿ ನ್ಯೂಯಾರ್ಕ್ ಸಂಸ್ಥಾನದಲ್ಲಿರುವ ಸಹಸ್ರದ್ವೀಪೋದ್ಯಾನದಲ್ಲಿ ಸ್ವಾಮೀಜಿ ನಡೆಸಿದ ಕೆಲವು ವಾರಗಳ ಪರ್ಯಂತದ ಸತ್ಸಂಗದಲ್ಲಿ ಭಾಗವಹಿಸಿದಳು. ಅಲ್ಲಿನ ತನ್ನ ಅನುಭವಗಳನ್ನು ಸುದೀರ್ಘವಾಗಿ ಬರೆಯುವಾಗ ಅವರ ಹಾಸ್ಯಪ್ರವೃತ್ತಿಯನ್ನೂ ಅವಳು ಗಮನಿಸುತ್ತಾಳೆ. ಆಗ ಹನ್ನೊಂದು ಜನ ಶಿಷ್ಯರ ನಡುವೆ ವಾಸಿಸುತ್ತಿದ್ದ ಸ್ವಾಮೀಜಿ ವೇದಾಂತದ ಗಂಭೀರ ಪ್ರವಚನಗಳ ನಡುವೆ ಆಗಾಗ ಹಾಸ್ಯದ ಹೊನಲನ್ನೂ ಹರಿಸುತ್ತಿದ್ದರು. ಇದು ವಾತಾವರಣದ ಬಿಗುವನ್ನು ಸಡಿಲಗೊಳಿಸುತ್ತಿತ್ತು. ಈ ಶಿಶುಸದೃಶವಾದ ಆನಂದವು ಒಬ್ಬ ಬ್ರಹ್ಮಸಾಕ್ಷಾತ್ಕಾರ ಪಡೆದ ಮಹಾಮಾನವನಿಗೆ ಮಾತ್ರ ಸಾಧ್ಯ ಎಂದು ಆ ಶಿಷ್ಯರು ಕಂಡುಕೊಂಡರು. ಸ್ವಾಮೀಜಿ ಹಾಸ್ಯಮಯ ಕಥೆಗಳ ಭಂಡಾರವನ್ನೇ ಹೊಂದಿದ್ದರು. ಆಗಾಗ ಆ ಕಥೆಗಳನ್ನು ಸ್ವಾರಸ್ಯವಾಗಿ ಹೇಳುತ್ತಿದ್ದರು.

### ನರಭಕ್ಷಕ ದ್ವೀಪ

ಒಬ್ಬ ಕ್ರಿಶ್ಚಿಯನ್ ಧರ್ಮಪ್ರಚಾರಕ ಮಿಶನರಿಯನ್ನು ಹೊಸದಾಗಿ ಒಂದು ಅಪರಿಚಿತ ದ್ವೀಪಕ್ಕೆ ಕಳುಹಿಸಲಾಯಿತು. ಅವನನ್ನು ಸ್ವಾಗತಿಸಲು ಬಂದ ಜನರನ್ನು ಆತ ಕೇಳಿದ, "ನನಗೆ ಮೊದಲು ಇಲ್ಲಿಗೆ ಬಂದಿದ್ದ ಪ್ರಚಾರಕ ಎಂತಹವನು? ನಿಮಗೆ ಇಷ್ಟವಾದನೇ?" ಸ್ವಾಗತ ಸಮಿತಿಯವರು ಹೇಳಿದರು, "ಆಹಾ! ಆತ ಅದೆಷ್ಟು ರುಚಿಯಾಗಿದ್ದ!" ಅವರೆಲ್ಲ ಅವನನ್ನು ತಿಂದುಬಿಟ್ಟಿದ್ದರು. ಅವರು ನರಮಾಂಸಭಕ್ಷಕರು!!

### ನೀಗ್ರೋ ಪ್ರಚಾರಕ

ಸ್ವಾಮೀಜಿ ಹೇಳುತ್ತಿದ್ದ ಇನ್ನೊಂದು ಕಥೆಯೆಂದರೆ, ನೀಗ್ರೋ ಧರ್ಮಪ್ರಚಾರಕನ ಕಥೆ. ಆ ಜನ ಆಗಿನ ಕಾಲದಲ್ಲಿ ಅಷ್ಟೇನೂ ಸುಸಂಸ್ಕೃತರಾಗಿರಲಿಲ್ಲ, ವಿದ್ಯಾವಂತರಾಗಿರಲಿಲ್ಲ. ಆದರೆ ಅವರಿಗೆ ದೇವರಲ್ಲಿ ಅಪಾರ ನಂಬಿಕೆ, ಶ್ರದ್ಧೆ ಇತ್ತು. ಬೈಬಲ್ಲಿನಲ್ಲಿ ಬರುವ ಸೃಷ್ಟಿಯ ವಿಚಾರ ಹೇಳುತ್ತಾ ಈ ಪ್ರಚಾರಕ ತನ್ನದೇ ಆದ ರೀತಿಯಲ್ಲಿ ಹೀಗೆ ಹೇಳಿದ, "ದೇವರು ಅದಮನನ್ನು (Adam) ಸೃಷ್ಟಿ ಮಾಡಿದ. ತೇವ ಒಣಗಲಿ ಎಂದು ಅವನನ್ನು ಒಂದು ಬೇಲಿಗೆ ಒರಗಿಸಿ ಕುಳ್ಳಿರಿಸಿದ..." ಆಗ ಸಭೆಯಿಂದ ಒಂದು ಪ್ರಶ್ನೆ ಬಂದಿತು. "ಅಣ್ಣಾ, ಸ್ವಲ್ಪ ನಿಲ್ಲಿಸು. ದೇವರು ಅದಮನನ್ನು ಸೃಷ್ಟಿಸಿದ, ಸರಿ. ಆದರೆ ಅಲ್ಲಿ ಬೇಲಿಯನ್ನು ಯಾರು ಸೃಷ್ಟಿಸಿದರು?" ಆಗ ಪ್ರಚಾರಕ ಪ್ರಶ್ನೆ ಬಂದ ದಿಕ್ಕಿಗೆ ಬಾಗಿ ಗಂಭೀರವಾಗಿ ಹೇಳಿದ, "ಇಂತಹ ಇನ್ನೊಂದು ಪ್ರಶ್ನೆ ಕೇಳಿದರೆ ನಮ್ಮ ಧರ್ಮದ ಮೂಲವೇ ನಾಶವಾಗಿ ಹೋಗುತ್ತದೆ!" ಹೀಗಿತ್ತು ಆ ಪ್ರಚಾರಕನ ಧರ್ಮದ ತಿಳಿವಳಿಕೆ.

### ಹೂಮಾರುವ ಸ್ವಾಮೀಜಿ

ಸ್ವಾಮೀಜಿಗೆ ಒಬ್ಬ ಮಹಿಳೆ ಈ ಪ್ರಶ್ನೆ ಕೇಳಿದಳು, "ಸ್ವಾಮಿ, ನೀವು ಬಡ್ಡಿಸ್ಟರೇ? " ಆಕೆಗೆ Buddhist (ಬೌದ್ಧರು) ಎಂಬ ಪದದ ಅರ್ಥ ಗೊತ್ತಿರಲಿಲ್ಲ. ಅವಳು ಸ್ವಾಮೀಜಿಯನ್ನು ಮೊಗ್ಗು ವ್ಯಾಪಾರಿ ಎಂದು ತಿಳಿದುಕೊಂಡಳೇನೋ? ಆದರೆ ಸ್ವಾಮೀಜಿ, "ಇಲ್ಲಾ ಮೇಡಂ, ನಾನೊಬ್ಬ ಫ್ಲೋರಿಸ್ಟ್ (ಹೂಮಾರುವವನು)" ಎಂದರು. ಆ ಮಹಿಳೆಗೆ ಏನು ಅರ್ಥವಾಯಿತೋ, ಸ್ವಾಮೀಜಿಗೆ ಹಾಸ್ಯ ಮಾಡಲು ಒಂದು ಅವಕಾಶ ಸಿಕ್ಕಿತು.

### ಭೂತಪ್ರೇತಗಳ ಸೃಷ್ಟಿಕರ್ತೆ

ನ್ಯೂಯಾರ್ಕ್ ನಗರದಲ್ಲಿ ಸ್ವಾಮಿ ವಿವೇಕಾನಂದರು ತಮ್ಮ ಶಿಷ್ಯ ಲಾಂಡ್ಸ್‌ಬರ್ಗ್ ಎಂಬುವನ ಜೊತೆಯಲ್ಲಿ ಲಾಡ್ಜಿನ ಒಂದು ಕೊಠಡಿಯಲ್ಲಿ ವಾಸಿಸುತ್ತಿದ್ದರು. ಅಲ್ಲಿನ ಅಡುಗೆ ಹೆಂಗಸು ಆಗಾಗ ಗಂಡನೊಡನೆ ಜಗಳ ಆಡುತ್ತಿದ್ದಳು. ಆ ಗಂಡನ ಹವ್ಯಾಸ ಮೃತರ ಆತ್ಮವನ್ನು ಒಂದು ಮಾಧ್ಯಮದ ಮೇಲೆ ಕರೆಯಿಸಿ, ಪ್ರಶ್ನೆಗಳಿಗೆ ಉತ್ತರ ದೊರಕಿಸುವುದು. ಅವನ ಹೆಂಡತಿಯೇ ಆ

ಮಾಧ್ಯಮವಾಗಿದ್ದಳು. ಪ್ರಶ್ನೆ ಕೇಳುವವರು ಹಣಕೊಡಬೇಕಾಗಿತ್ತು. ಅದರಿಂದ ಅವನಿಗೆ ಸಂಪಾದನೆ. ಒಂದು ದಿನ ಆ ಮಹಿಳೆ ಗಂಡನ ಬಗ್ಗೆ ಸ್ವಾಮೀಜಿಗೆ ಹೀಗೆ ದೂರು ಹೇಳಿದಳು: " ಅವನು ಹೀಗೆ ಆಡುವುದು ಸರಿಯೇ? ಅವನ ಭೂತಪ್ರೇತಗಳನ್ನು ನಾನೇ ತಾನೇ ತಯಾರು ಮಾಡುವುದು?! ಅವನು ನನ್ನನ್ನು ಹೀಗೆ ಗೋಳಾಡಿಸುವುದು ನ್ಯಾಯವೇ?" ಇದಕ್ಕೆ ಸ್ವಾಮೀಜಿ ಏನು ತಾನೇ ಪರಿಹಾರ ನೀಡಿಯಾರು?

### ಲ್ಯಾಂಡ್ಸ್‌ಬರ್ಗ್‌ನ ಭಾಷಣ

ಲ್ಯಾಂಡ್ಸ್‌ಬರ್ಗನನ್ನು ತಾವು ಮೊದಲು ನೋಡಿದ ಕಥೆಯನ್ನು ಸ್ವಾಮಿ ವಿವೇಕಾನಂದರು ಸ್ವಾರಸ್ಯವಾಗಿ ಹೇಳುತ್ತಿದ್ದರು. ಥಿಯಸಾಫಿಕಲ್ ಸೊಸೈಟಿಯಲ್ಲಿ ಲ್ಯಾಂಡ್ಸ್‌ಬರ್ಗ್ ಭಾಷಣ ಮಾಡುತ್ತಿದ್ದ. ಭಾಷಣದ ವಿಷಯ : **ಸೈತಾನ**. ಅವನು ಪದೇ ಪದೇ 'ಸೈತಾನ, ಸೈತಾನ' ಎಂದು ಹೇಳುತ್ತಿದ್ದಾಗ, ಬೆರಳು ಚಾಚಿ ತನ್ನೆದುರಿಗೆ ಕೆಂಪು ಬಟ್ಟೆ ಧರಿಸಿದ್ದ ಮಹಿಳೆಯೊಬ್ಬಳನ್ನು ತೋರಿಸುತ್ತಿದ್ದ. ಅದನ್ನು ಹೇಳುತ್ತ ಸ್ವಾಮೀಜಿ ವಿನೋದದಿಂದ ನಗುತ್ತಿದ್ದರು.

### ವಕೀಲ ವಂಶಸ್ಥ

ಒಂದು ದಿನ ನಮ್ಮಲ್ಲೊಬ್ಬರು ಸ್ವಾಮೀಜಿಯ ಎದುರು ವಾದಿಸಲು ಮುಂದಾದರು. ಆಗ ಅವರು ಹೇಳಿದರು: "ನಾನು ನಲವತ್ತು ಪೀಳಿಗೆಗಳಿಂದ ವಕೀಲರಾಗಿರುವ ವಂಶದಲ್ಲಿ ಹುಟ್ಟಿದವನು" ಎಂದು. ಕಡೆಗೆ ಅವನ ವಾದವನ್ನು ಖಂಡಿಸಿದರು. ಇಷ್ಟಾದರೂ ಇನ್ನೊಂದು ದಿನ ಅವರ ಶಿಷ್ಯರೊಬ್ಬರು "ನಿಮ್ಮೊಡನೆ ವಾದ ಮಾಡುವುದು ಅಸಾಧ್ಯ, ಸ್ವಾಮೀಜಿ. ಆದರೆ ಇದು ಹೀಗೇ ಎಂಬುದು ನಿಮಗೂ ಗೊತ್ತು" ಎಂದರು. ಅವರ ಈ ನಮ್ರತೆಯನ್ನು ನೋಡಿ, ಸ್ವಾಮೀಜಿ ಮೃದುವಾದರು. "ಹೌದು, ನೀವು ಹೇಳುವುದು ನಿಜ" ಎಂದು ಒಪ್ಪಿಕೊಂಡರು.

ಹೀಗೆ ಸಿಸ್ಟರ್ ಕ್ರಿಸ್ಟಿನ್ ಸ್ವಾಮಿ ವಿವೇಕಾನಂದರ ಹಲವು ಮುಖಗಳನ್ನು ಪರಿಚಯಿಸುತ್ತಾಳೆ.

### ಮಿಸೆಸ್ ಬ್ಲಾಡ್ಜೆಟ್

ಸ್ವಾಮೀಜಿ ಲಾಸ್ ಏಂಜಲಿಸ್‌ನಲ್ಲಿ ತಮ್ಮ ಭಾಷಣಗಳನ್ನು ಮಾಡಲಾರಂಭಿಸಿದಾಗ ಮಿಸೆಸ್ ಬ್ಲಾಡ್ಜೆಟ್ ಎಂಬ ಹಿರಿಯ ಮಹಿಳೆಯ ಮನೆಯಲ್ಲಿ ಉಳಿದುಕೊಂಡಿದ್ದರು. ಚಿಕಾಗೋ ಸಮ್ಮೇಳನದಲ್ಲಿಯೇ ಸ್ವಾಮೀಜಿಯವರಿಂದ ಪ್ರಭಾವಿತಳಾಗಿದ್ದ ಆಕೆ, ಸರಸಿ ಮತ್ತು ಸದಾ ಕರ್ಮನಿರತೆ. ಸ್ವಾಮಿಗಳ ಭಾಷಣಗಳನ್ನು ಕೇಳಲು ಹೆಚ್ಚಾಗಿ ಹೋಗದಿದ್ದರೂ ಮನೆಯಲ್ಲಿ ಸದಾ ಅವರೊಡನೆ ಸರಸ ಸಂಭಾಷಣೆಯಲ್ಲಿ ತೊಡಗಿರುತ್ತಿದ್ದಳು. ಆಕೆಯಲ್ಲಿ ಸ್ವಾಮೀಜಿಗೆ ಮಾತೃಪ್ರೇಮ.

### ಸ್ವಾರಸ್ಯವಾದುದು ಏನೂ ನಡೆಯುವುದಿಲ್ಲ

ಒಂದು ದಿನ ಸ್ವಾಮೀಜಿ ತಮ್ಮ ತಲೆಯ ಮುಂಡಾಸನ್ನು ಕಟ್ಟುವುದು ಹೇಗೆ ಎಂಬುದನ್ನು ಮಿಸ್ ಬ್ಲಾಡ್ಜೆಟ್‌ಗೆ ತೋರಿಸುತ್ತಿದ್ದರು. ಆಗ ಸ್ವಾಮೀಜಿಯ ಭಾಷಣದ ಸಮಯ ಮೀರುತ್ತಿತ್ತು. ಭಾಷಣದ ವ್ಯವಸ್ಥಾಪಕಿ ಜೋಸೆಫೀನ್ ಮ್ಯಾಕ್ಲೌಡ್ ಬಂದು "ಸ್ವಾಮಿ, ಹೊತ್ತಾಯಿತು. ಬೇಗ ಸಿದ್ಧರಾಗಿ" ಎಂದು ಅವಸರ ಮಾಡಿದಳು. ಆಗ ಮಿಸೆಸ್ ಬ್ಲಾಡ್ಜೆಟ್ ಹೇಳುತ್ತಾಳೆ: "ಸ್ವಾಮಿ, ಅವಸರವೇನೂ ಬೇಡ. ಒಬ್ಬ ಮನುಷ್ಯನನ್ನು ಗಲ್ಲಿಗೇರಿಸಬೇಕಾಗಿತ್ತು. ಆ ಶಿಕ್ಷೆಯ ದೃಶ್ಯವನ್ನು ನೋಡುವ ಉತ್ಸಾಹದಿಂದ ಜನಜಂಗುಳಿ ಅಲ್ಲಿ ಸೇರಿತ್ತು. ಎಲ್ಲರೂ ಗದ್ದಲ ಮಾಡುತ್ತ ನುಗ್ಗುತ್ತಿದ್ದರು. ಆಗ ಬಲಿ ಪಶುವಿನಂತೆ ನಿಂತಿದ್ದ ಆ ಮನುಷ್ಯ ಜನರಿಗೆ ಹೇಳಿದ, "ಯಾಕೆ ಅವಸರ ಮಾಡುತ್ತಿದ್ದೀರಿ? ನಾನು ಅಲ್ಲಿಗೆ ಹೋಗುವ ತನಕ ಅಲ್ಲಿ ಯಾವ ಸ್ವಾರಸ್ಯವೂ ನಡೆಯುವುದಿಲ್ಲ." ಮಿಸೆಸ್ ಬ್ಲಾಡ್ಜೆಟ್ ಈ ಘಟನೆಯನ್ನು ವಿವರಿಸುತ್ತ ಹೇಳಿದಳು. "ಸ್ವಾಮಿ, ನೀವೂ ಹಾಗೆಯೇ. ನೀವು ಅಲ್ಲಿಗೆ ಹೋಗುವ ತನಕ ಅಲ್ಲಿ ಸ್ವಾರಸ್ಯವಾದದ್ದು ಏನೂ ನಡೆಯುವುದಿಲ್ಲ." ಅನಂತರ ಸ್ವಾಮೀಜಿಗೆ ಯಾರಾದರೂ ಹೊತ್ತಾಯಿತು ಎಂದು ಅವಸರಪಡಿಸಿದರೆ, ಅವರು "ನಾನು ಅಲ್ಲಿಗೆ ಹೋಗುವವರೆಗೂ ಅಲ್ಲಿ ಸ್ವಾರಸ್ಯವಾದುದು ಏನೂ ನಡೆಯುವುದಿಲ್ಲ" ಎಂದು ಹೇಳಿ ಬಾಲಕನಂತೆ ಗೊಳ್ಳೆಂದು ನಗುತ್ತಿದ್ದರು.

### ಮಹಿಳೆಯರ ನೆರವು

ಮಿಸೆಸ್ ಬ್ಲಾಡ್ಜೆಟ್ ಒಂದು ದಿನ ಸ್ವಾಮೀಜಿಯವರ ಒಂದು ಭಾಷಣಕ್ಕೆ ಹೋದಳು. ಅಲ್ಲಿ ಒಬ್ಬ ಮಹಿಳೆ ಸ್ವಾಮೀಜಿಗೆ ಹೀಗೆ ಪ್ರಶ್ನೆ ಕೇಳಿದಳು. "ಸ್ವಾಮಿ, ನಿಮ್ಮ ದೇಶದಲ್ಲಿರುವ ಅಸಂಖ್ಯಾತ ಸಾಧುಸಂನ್ಯಾಸಿಗಳನ್ನು ಪೋಷಿಸುವವರು ಯಾರು? ಅವರು ಅದೆಷ್ಟು ಜನ ಇರುತ್ತಾರೆ, ಅಲ್ಲವೆ?" ಸ್ವಾಮೀಜಿಯ ಉತ್ತರ ಮಿಂಚಿನಂತೆ ಬಂತು, "ನಿಮ್ಮ ದೇಶದಲ್ಲಿ ಚರ್ಚುಗಳ ಧರ್ಮ ಪ್ರಚಾರಕರನ್ನು ಯಾರು ಸಲಹುತ್ತಾರೋ ಅವರೇ.. ಮಾತೆಯರು." ಸ್ವಾಮೀಜಿಗೆ ಅಮೆರಿಕೆಯ ಮಹಿಳೆಯರ ಸೌಹಾರ್ದದ ವಿಷಯದಲ್ಲಿ ಬಹಳ ಅಭಿಮಾನ.

### ರೀವ್ಸ್ ಕಾಲ್ ಕಿನ್ಸ್

ಸ್ವಾಮೀಜಿ ಈಜಿಪ್ಟ್ ಮೂಲಕ ಭಾರತಕ್ಕೆ ಹಡಗಿನಲ್ಲಿ ಪ್ರಯಾಣಿಸುವಾಗ ರೀವ್ಸ್ ಅವರ ಪರಿಚಯ ಆಯಿತು. ಅವರಲ್ಲಿ ಸ್ನೇಹ ಮೂಡಿತು. ಇಬ್ಬರೂ ಒಂದೇ ಮೂಲೆಯಲ್ಲಿ ಊಟ ಮಾಡುತ್ತಿದ್ದರು. ಒಂದು ದಿನ ಸ್ವಾಮೀಜಿ ಹೇಳಿದರು, "ನೀವು ಅಮೆರಿಕನ್ನರೆ?" "ಹೌದು" "ಮಿಶನರಿಯೇ ?" " ಹೌದು" ನೀವೇಕೆ ನನ್ನ ದೇಶದಲ್ಲಿ ನಿಮ್ಮ ಧರ್ಮವನ್ನು ಬೋಧಿಸುತ್ತೀರಿ?" ಸ್ವಾಮೀಜಿ ಕೇಳಿದರು. ರೀವ್ಸ್ ತಾನೂ ಕೇಳಿಬಿಟ್ಟ, " ನೀವೇಕೆ ನನ್ನ ದೇಶದಲ್ಲಿ ನಿಮ್ಮ ಧರ್ಮವನ್ನು ಬೋಧಿಸುತ್ತೀರಿ?" ಸ್ವಲ್ಪ ಹೊತ್ತು ಶಬ್ದವೇ ಇಲ್ಲ. ನಂತರ ಇಬ್ಬರೂ ನಗೆಯಲ್ಲಿ ಮುಳುಗಿದರು. ಅವರಿಬ್ಬರ ಸ್ನೇಹಕ್ಕೆ ಇದು ನಾಂದಿಯಾಯಿತು. ರೀವ್ಸ್ ವಿವೇಕಾನಂದರ ಅದ್ಭುತ ವಾಗ್ವೈಖರಿ, ಚತುರೋಕ್ತಿಗಳು, ವಾದಪ್ರಖರತೆಗೆ ಮಾರುಹೋದ.

### ಮಿಸೆಸ್ ಆಲಿಸ್ ಹಾನ್ಸ್‌ಬ್ರೋ

ಸ್ವಾಮೀಜಿ ಮೊದಲನೆಯ ಸಲ ಅಮೆರಿಕೆಗೆ ಹೋದಾಗ ಕ್ಯಾಲಿಫೋರ್ನಿಯಾ ಸಂಸ್ಥಾನಕ್ಕೆ ಹೋಗಲಿಲ್ಲ. ಎರಡನೆಯ ಸಲ ೧೮೯೯-೧೯೦೦ ರಲ್ಲಿ ಲಾಸ್ ಏಂಜಲಿಸ್, ಸ್ಯಾನ್‌ಫ್ರಾನ್ಸಿಸ್ಕೊ ಪ್ರದೇಶಗಳಲ್ಲಿ ವ್ಯಾಪಕವಾಗಿ ಸಂಚರಿಸಿದರು. ಭಾಷಣ ಮತ್ತು ತರಗತಿಗಳನ್ನು ನಡೆಸಿದರು. ಆಗ ಅವರ ಭಾಷಣಗಳನ್ನು ಬಹು

ಶ್ರದ್ಧೆಯಿಂದ ಕೇಳಿದ ಆಲಿಸ್ ಮೀಡ್ ಹ್ಯಾನ್ಸ್‌ಬ್ರೊ ಎಂಬ ಮಹಿಳೆ ಸ್ವಾಮೀಜಿಯವರ ಶಿಷ್ಯವರ್ಗಕ್ಕೂ ಸೇರಿ ಅವರ ಕಾರ್ಯದಲ್ಲಿ ನೆರವಾದಳು. ೧೯೪೧ ರಲ್ಲಿ ಸ್ವಾಮಿ ಅಶೋಕಾನಂದರು ಅವಳೊಡನೆ ಸಂದರ್ಶನ ನಡೆಸಿದರು. ಕ್ಲೆಷನ್ (ಮುಂದೆ ಸ್ವಾಮಿ ಚಿದ್ರೂಪಾನಂದ) ಮಾತುಕತೆಗಳನ್ನು ಬರೆದಿಟ್ಟರು. ಇದರ ವರದಿಗಳು ಪ್ರಬುದ್ಧಭಾರತದ ೨೦೦೭ ನೆಯ ಇಸವಿಯ ಹಲವು ಅಂಕಗಳಲ್ಲಿ ಪ್ರಕಟವಾಗಿವೆ. ಇನ್ನು ಮುಂದೆ ಬರುವ ವಿಷಯಗಳು ಅಲ್ಲಿನವೇ.

### ನಾನು ತಪ್ಪಿಸಿಕೊಂಡುಬಿಟ್ಟೆ

ಮಿಸ್ ಮೆಕ್‌ಕ್ಲಾರಿ ಎಂಬಾಕೆ ಸ್ವಾಮೀಜಿಯವರ ಭಾಷಣಗಳನ್ನು ಬರೆದುಕೊಳ್ಳುತ್ತಿದ್ದಳು. ಆದುದರಿಂದ ಅವರು ಹೋದಕಡೆಯೆಲ್ಲ ಆಕೆಯೂ ಹೋಗುತ್ತಿದ್ದಳು. ಒಂದು ದಿನ ಭಾಷಣದ ನಂತರ ಆಕೆ ಒಂದು ದಡ್ಡ ಪ್ರಶ್ನೆ ಕೇಳಿದಳು, "ಹಿಂದು ತಾಯಂದಿರು ಮಕ್ಕಳು ತಮಗೆ ಬೇಡ ಎಂದು ಮಕ್ಕಳನ್ನು ಗಂಗಾನದಿಗೆ ಎಸೆಯುತ್ತಾರಂತೆ, ಇದು ನಿಜವೆ?" ಸ್ವಾಮೀಜಿಯ ಉತ್ತರ, "ಹೌದು, ಮೇಡಂ. ಆದರೆ ನಾನು ತಪ್ಪಿಸಿಕೊಂಡುಬಿಟ್ಟೆ. ಆದರೆ ಈಚೆಗೆ ಗಂಡಸರೇ ಮಕ್ಕಳನ್ನು ಹೆರುತ್ತಿದ್ದಾರೆ." ಆಗ ಮಿಸ್ ಮೆಕ್‌ಕ್ಲಾರಿ ತನ್ನ ಪೆದ್ದುತನವನ್ನು ಅರಿತುಕೊಂಡು ಕುರ್ಚಿಯ ಹಿಂದೆ ಅವಿತುಕೊಂಡಳು. ಸ್ವಾಮೀಜಿ ಹೇಳಿದರು, "ಅಂತಹ ಪ್ರಶ್ನೆಯನ್ನು ಕೇಳಿದ್ದರೆ ನಾನೂ ಹಾಗೆಯೇ ಅವಿತುಕೊಳ್ಳುತ್ತಿದ್ದೆ."

### ಮನೆಯಲ್ಲಿ ಸರಳತೆ

ಹೊರಗೆ ಹೋಗುವಾಗ ಸ್ವಾಮೀಜಿ ತಮ್ಮ ಪೋಷಾಕು ತಲೆಕೂದಲು ಎಲ್ಲ ಅಚ್ಚುಕಟ್ಟಾಗಿರುವಂತೆ ಎಚ್ಚರವಹಿಸುತ್ತಿದ್ದರು. ಆದರೆ ಮನೆಯಲ್ಲಿರುವಾಗ ಅದರ ಬಗ್ಗೆ ಗಮನಹರಿಸುತ್ತಿರಲಿಲ್ಲ. ಆಲಿಸ್ ಮನೆಯಲ್ಲಿ ಅವರು ಎರಡು ಮೂರು ತಿಂಗಳು ಅತಿಥಿಯಾಗಿದ್ದರು. ಬೆಳಗ್ಗೆ ಮೇಲು ಮಹಡಿಯಲ್ಲಿರುವ ತಮ್ಮ ಕೊಠಡಿಯಿಂದ ತಿಂಡಿಗಾಗಿ ಕೆಳಗೆ ಇಳಿಯುವಾಗ ತಮ್ಮ ಹಳೆಯ ಗೌನ್ ಅನ್ನು ಧರಿಸುತ್ತಿದ್ದರು. ಕಾಲಿಗೆ ಬರೀ ಸಾಧಾರಣ ಚಪ್ಪಲಿ ಹಾಕುತ್ತಿದ್ದರು. ಒಂದು ದಿನ ಅವರು ಹೇಳಿದರು, "ಮನೆಯಲ್ಲಿರುವಾಗ ನಾನು ಉಡುಪಿನ ಮೇಲೆ ಏಕೆ ಗಮನ ಕೊಡಬೇಕು? ನಾನೇನು ಮದುವೆ ಮಾಡಿಕೊಳ್ಳಬೇಕಾಗಿಲ್ಲವಲ್ಲ!"

### ಮಿಶನರಿಗಳ ಮೇಲೆ ಅಪನಂಬಿಕೆ

ಲಾಸ್ ಏಂಜಲಿಸ್‌ನಲ್ಲಿದ್ದಾಗ ಸ್ವಾಮೀಜಿಗೆ ಸ್ಯಾನ್‌ಫ್ರಾನ್ಸಿಸ್ಕೊದ ಒಂದು ಚರ್ಚಿನಿಂದ ಭಾಷಣ ಮಾಡಲು ಆಹ್ವಾನ ಬಂದಿತು. ಸ್ವಾಮೀಜಿ ಆಹ್ವಾನಕ್ಕೆ ಉತ್ಸಾಹ ತೋರಲಿಲ್ಲ. ಅವರು ಹೇಳಿದರು, "ನಮ್ಮ ಕಾರ್ಯವನ್ನು ನಾವೇ ಮಾಡೋಣ. ನಾನು ಒಬ್ಬ ಅಮೆರಿಕನ್ ಮಹಿಳೆಯನ್ನು ನಂಬಲು ಇಚ್ಛಿಸುತ್ತೇನೆ. ಅಮೆರಿಕೆಯ ಗಂಡಸರನ್ನೂ ನಂಬುತ್ತೇನೆ. ಆದರೆ ಅಮೆರಿಕನ್ ಧರ್ಮಪ್ರಚಾರಕರನ್ನು ಮಾತ್ರ ಯಾವತ್ತೂ ನಂಬಲಾರೆ."

### ಸೀಬೆಹಣ್ಣು ತ್ಯಾಗ

ವಸಂತಕಾಲ. ತನ್ನ ಮನೆಯಲ್ಲಿ ಯಾವಾಗಲೂ ಆ ಸಮಯದಲ್ಲಿ ಬೆಳೆಯುವ ಹಣ್ಣುಗಳನ್ನು ಮೇಜಿನ ಮೇಲೆ ಆಲಿಸ್ ಮೀಡ್ ಹ್ಯಾನ್ಸ್‌ಬ್ರೊ ಇರಿಸುತ್ತಿದ್ದಳು. ಒಂದು ದಿನ ಸೀಬೆಹಣ್ಣು ಇಟ್ಟಿದ್ದಳು. ಲೆಂಟ್ ಎಂಬ ವ್ರತಾಚರಣೆಯ ಸಮಯದ ಬಗ್ಗೆ ಮಾತು ಆರಂಭವಾಯಿತು. ಆ ನಲವತ್ತು ದಿನಗಳ ಅವಧಿಯಲ್ಲಿ ಯಾವುದಾದರೂ ಪ್ರಿಯವಾದ ವಸ್ತುವನ್ನು ತ್ಯಾಗ ಮಾಡುವುದು ಕ್ರೈಸ್ತರ ಸಂಪ್ರದಾಯ. ಇಂತಹ ಪದ್ಧತಿ ಭಾರತದಲ್ಲಿಯೂ ಇದೆಯೆಂದೂ ಸ್ವಾಮೀಜಿ ಹೇಳಿದರು, "ನನ್ನಂತಹ ಕೆಲವು ಕೆಟ್ಟ ಜನರನ್ನು ಬಿಟ್ಟು ಎಲ್ಲರೂ ಏನನ್ನಾದರೂ ತ್ಯಾಗ ಮಾಡುತ್ತಾರೆ. ಈಗ ಉದಾಹರಣೆಗೆ ನೋಡಿ, ನಾನು ಈ ಸೀಬೆಹಣ್ಣುಗಳನ್ನು ತ್ಯಾಗಮಾಡುತ್ತೇನೆ." ಈ ಹಣ್ಣು ಅವರಿಗೆ ಇಷ್ಟ ಇಲ್ಲ ಎಂದು ಆಮೇಲೆ ತಿಳಿಯಿತು. ಆನಂತರ ಎಂದೂ ಸೀಬೆಹಣ್ಣು ಮೇಜಿನ ಮೇಲೆ ಬರುತ್ತಿರಲಿಲ್ಲ.

### ಜಲರಾಕ್ಷಸಿಯ ಕಥೆ

ಸ್ಯಾನ್‌ಫ್ರಾನ್ಸಿಸ್ಕೋದಲ್ಲಿದ್ದಾಗ ತಮ್ಮ ಗುರುಗಳು ಹೇಳುತ್ತಿದ್ದ ಎರಡು ಕಥೆಗಳನ್ನು ಸ್ವಾಮೀಜಿ ಹೇಳಿದರು. ಒಂದನೆಯದು ರಾಕ್ಷಸಿಯ ಕಥೆ. ಅವಳು ಅಲ್ಲೇ ಒಂದು ಕೊಳದಲ್ಲಿರುತ್ತಿದ್ದಳು. ಅವಳ ಕೂದಲು ಉದ್ದವಾಗಿದ್ದವು, ರಬ್ಬರಿನ ಹಾಗೆ ಎಳೆದಷ್ಟೂ ಉದ್ದವಾಗುತ್ತಿತ್ತು. ಸ್ನಾನಕ್ಕೆಂದು ಕೊಳಕ್ಕೆ ಬಂದ ಯಾರಾದರೂ ಒಬ್ಬರನ್ನು ರಾಕ್ಷಸಿ ತಿಂದುಹಾಕಿಬಿಡುತ್ತಿದ್ದಳು. ಹಸಿವಿಲ್ಲದಿದ್ದರೆ, ಒಬ್ಬ ವ್ಯಕ್ತಿಯ ಕಾಲುಬೆರಳಿಗೆ ತನ್ನ ಕೂದಲನ್ನು ಕಟ್ಟಿಬಿಡುತ್ತಿದ್ದಳು. ಆ ವ್ಯಕ್ತಿ ಮನೆಗೋ ಎಲ್ಲಿಗೆ ಹೋದರೂ ಆ ಕೂದಲು ಉದ್ದವಾಗುತ್ತ ಅವನನ್ನು ಕಟ್ಟಿಕೊಂಡೇ ಇರುತ್ತಿತ್ತು. ಅದು ಬೇರೆಯವರಿಗೆ ಕಾಣಿಸುತ್ತಿರಲಿಲ್ಲ. ಮುದುಕಿ ದೆವ್ವಕ್ಕೆ ಹಸಿವಾದಾಗ ಆ ಕೂದಲನ್ನು ಸೆಳೆದುಕೊಂಡು ಆ ವ್ಯಕ್ತಿಯನ್ನು ತಿಂದುಹಾಕುತ್ತಿದ್ದಳು. ಕಡೆಗೆ ಸ್ವಾಮೀಜಿ ಕಣ್ಣುಮಿಟುಕಿಸುತ್ತ ಹೇಳುವರು, "ಮನೆಗಾದರೂ ಹೋಗು, ಎಲ್ಲಿಗಾದರೂ ಹೋಗು. ಕೊನೆಗೆ ಕೊಳಕ್ಕೆ ಹಿಂತಿರುಗಲೇ ಬೇಕು."

### ಸದಾ ಹರ್ಷಚಿತ್ತ

ಸ್ವಾಮೀಜಿ ಸದಾ ತನ್ಮಯರು. ಸದಾ ಸಚ್ಚಿದಾನಂದದಲ್ಲಿ ತಲ್ಲೀನರಾಗಿರುತ್ತಿದ್ದರು. ತಮ್ಮ ಹತ್ತಿರಕ್ಕೆ ಬಂದವರನ್ನು ಉದ್ಧರಿಸುವುದು ಅವರಿಗೆ ಸಹಜವಾಗಿತ್ತು. ಇದಕ್ಕಾಗಿ ಹಾಸ್ಯವನ್ನೂ ಧಾರಾಳವಾಗಿ ಬಳಸಿಕೊಳ್ಳುತ್ತಿದ್ದರು. ಸ್ವಾಮೀಜಿ ಸಾಧಕನಾಗಲೀ, ಸಿದ್ಧನಾಗಲೀ ಸದಾ ಗೋಳುಮುಖ ಹಾಕಿಕೊಂಡಿರಬೇಕೆಂದು ತಿಳಿದಿರಲಿಲ್ಲ. ಶ್ರೀರಾಮಕೃಷ್ಣರಿಗೆ ಶ್ರೀಶಂಕರಾಚಾರ್ಯರು ರಚಿಸಿದ ರೆನ್ನಲಾದ **"ಸಂಸಾರದುಃಖಗಹನಾತ್ ಜಗದೀಶ ರಕ್ಷ"** ಎಂಬ ಶಿವಸ್ತೋತ್ರ ಮೆಚ್ಚುಗೆಯಾಗಿರಲಿಲ್ಲವಂತೆ. ಈ ಜಗತ್ತು ಒಂದು ಆನಂದದ ಕುಟೀರ ಎಂದೇ ಅವರು ಪ್ರತಿಪಾದಿಸುತ್ತ, ಆನಂದ ಮಯರಾಗಿದ್ದರು. ಅದೇ ರೀತಿ ಅವರ ಶಿಷ್ಯಾಗ್ರೇಸರರಾದ ಸ್ವಾಮಿ ವಿವೇಕಾನಂದರೂ ಕೂಡ ಸದಾ ಹಸನ್ಮುಖಿಯಾಗಿರುತ್ತಿದ್ದರು.

**ಶಾಂತೋ ಮಹಾಂತೋ ನಿವಸಂತಿ ಸಂತಃ**
**ವಸಂತವತ್ ಲೋಕಹಿತಂ ಚರಂತಃ**

"ಶಾಂತಚಿತ್ತದಿಂದ ಇರುವ ಮಹಾತ್ಮರು ವಸಂತಋತುವಿನಂತೆ ಲೋಕಕ್ಕೆ ಹಿತವನ್ನೂ ಆನಂದವನ್ನೂ ನೀಡುತ್ತ ಸಂಚರಿಸುತ್ತಾರೆ" (*ವಿವೇಕಚೂಡಾಮಣಿ*). ■